OS No. 185/2021 PW-1

<u>ದಿನಾಂಕ **10.06.2024** ರಂದು ಸಾಕ್ಷಿಯನ್ನು ಕರೆಯಿಸಿ, ಪ್ರಮಾಣ ವಚನ ಬೋಧಿಸಲಾಯಿತು.</u>

<u>ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಬಿ ಜಿ ವಕೀಲರಿಂದಃ</u>

ನನಗೆ 4 ಎಕರೆ ಖುಷ್ಕಿ ಜಮೀನು ಇದೆ. ಮಾವು, ತೆಂಗು, ಬೇವು, ಕಾಡು ಮರಗಳು ಇವೆ. ಅದರಲ್ಲಿ ಕಟ್ಟಡ ಇಲ್ಲ. ಹಳೇ ಹಂಚಿನ ಮನೆ ಇದೆ. ಅದರಲ್ಲಿ ಬೋರ್ ವೆಲ್ ಇದೆ. ದಾವಾ ಆಸ್ತಿ ಸಿ ಟಿ ಯಿಂದ 12-14 ಕಿ. ಮೀ ಅಂತರದಲ್ಲಿದೆ. ನಾನು ಶಿಕ್ಷಣ ಇಲಾಖೆಯಲ್ಲಿ ಅದೀಕ್ಷಕನಾಗಿ ಕೆಲಸ ಮಾಡುತ್ತಿದ್ದೇನೆ.

2. ದಾವಾ ಆಸ್ತಿ ಮೌಲ್ಯ 1 ಕೋಟಿ ಮೇಲಾಗುತ್ತದೆ ಎಂದರೆ ಸುಳ್ಳು. ದಾವಾ ಆಸ್ತಿ 30 ಲಕ್ಷ ಬೆಲೆ ಬಾಳುತ್ತದೆ ಎಂದು ದಾಖಲೆ ಹಾಜರು ಮಾಡಿಲ್ಲ. ನಾನು ಮುಂಗಡ ಹಣವನ್ನು ಪ್ರತಿವಾದಿಗೆ ಶೇಕಡಾ 2 ರಂತೆ ಸಾಲಕ್ಕಾಗಿ ಕೊಟ್ಟಿದ್ದೆ ಎಂದರೆ ಸುಳ್ಳು. ನವೆಂಬರ್ 2021 ರವರೆಗೂ ಪ್ರತಿವಾದಿಗೆ ನನಗೆ ಬಡ್ಡಿ ಪಾವತಿ ಮಾಡಿದ್ದಾನೆಂದರೆ ಸುಳ್ಳು. ಸಾಲದ ಭದ್ರತೆಗಾಗಿ ಕರಾರು ಪತ್ರವನ್ನು ನಿಪಿ-1 ಅನ್ನು ಬರೆದಿದ್ದಾರೆಂದರೆ ಸುಳ್ಳು. ದಾವಾ ಆಸ್ತಿಯನ್ನು ಬರೆದುಕೊಡುವ ಉದ್ದೇಶ ಪ್ರತಿವಾದಿಗೆ ಇರಲಿಲ್ಲ ಎಂದರೆ ಸುಳ್ಳು. ಕರಾರು ದಿನದಿಂದ 6 ತಿಂಗಳ ಒಳಗೆ ನಾನು ಪ್ರತಿವಾದಿಗೆ ನೋಟೀಸ್ ಅನ್ನು ಕೊಟ್ಟಿಲ್ಲ ಸಾಕ್ಷಿ ಮುಂದುವರೆದು ಪ್ರತಿವಾದಿ ಕಾಲ ಕೇಳಿದ್ದರು ಎಂದು ನುಡಿಯುತ್ತಾರೆ. ಬಡ್ಡಿ ಪಾವತಿ ಮಾಡುತ್ತಿದ್ದರಿಂದ ನಾನು ನೋಟೀಸ್ ಕೊಟ್ಟಿಲ್ಲ ಎಂದರೆ ಸುಳ್ಳು. ನಾನು 5 ಲಕ್ಷ ಹಣವನ್ನು ನ್ಯಾಯಾಲಯದಲ್ಲಿ ಠೇವಣಿ ಇಟ್ಟಿಲ್ಲ. ನಾನು ಖರೀದಿ ಮಾಡಿಕೊಳ್ಳಲು ತಯಾರಿಲ್ಲ ಎಂದರೆ ಸುಳ್ಳು. ಪ್ರತಿವಾದಿಯವರು ಈಗಲೂ ಮುಂಗಡ ಹಣವನ್ನು ಮತ್ತು ಬಡ್ಡಿ ಕೊಡಲು ತಯಾರಿದ್ದಾರೆಂದರೆ ಸುಳ್ಳು. ದಾವಾ ಆಸ್ತಿಯ ಮೇಲೆ ಪ್ರತಿವಾದಿಯವರ ಜೀವನ ನಡೆಯುತ್ತಿದೆ ಎಂದರೆ ಸುಳ್ಳು.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಗಣಕೀಕರಣ ಮಾಡಲಾಯಿತು)**Na**

ಓ.ಹೇ.ಕೇ.ಸ.ಒ

(ವೆಂಕಟೇಶಪ್ಪ. ವಿ)
ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ.,ಚನ್ನಪಟ್ಟಣ.